

ಮಂಸೋರೆ ನಿರ್ದೇಶನದ **ನಾತಿಚರಾಮಿ** ಸಿನಿಮಾ ಈ ವರ್ಷ ಐದು ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಹೆಣ್ಣಿನ ದೇಹಬಯಕೆ ಮತ್ತು ಪ್ರೇಮಸಂಬಂಧಗಳ ಘರ್ಷಣೆ ಮತ್ತು ಸಮಾಜದ ಸಂಪ್ರದಾಯಗಳ ಹೇರಿಕೆಗಳನನ್ನು ಮುಖಾಮುಖಿಯಾಗಿಸುವ ಈ ಸಿನಿಮಾ ವಿರುದ್ಧ; ಸಿನಿಮಾದ ಮುಖ್ಯಪಾತ್ರದಲ್ಲಿ ನಟಿಸಿರುವ ಶ್ರುತಿ ಹರಿಹರನ್ ವಿರುದ್ಧ ಸಂಪ್ರದಾಯವಾದಿಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹೇಟ್ ಕ್ಯಾಂಪೇನ್ ಕೂಡ ನಡೆದಿತ್ತು.

## ಝಣಝಣ ಕಾಂಚಾಣ, ಗುಣ ಗೌಣ

ಗುಣವನ್ನು ನಿರ್ಣಯಿಸುವುದು ಹೇಗೆ? ಅದಕ್ಕಿರುವುದು ಮೂರು ದಾರಿ: ಸಿನಿಮಾಗಳಿಗೆ ಸಲ್ಲುವ ಪುರಸ್ಕಾರಗಳು ಗುಣಮಟ್ಟದ ಒಂದು ಮಾನದಂಡ. ಎರಡನೆಯದು, ಇತರ ಭಾಷೆಗಳ ಚಿತ್ರಗಳೊಂದಿಗೆ ಹೋಲಿಸಿಕೊಳ್ಳುವುದು; ರಾಷ್ಟ್ರ–ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಿನಿಮಾ ಎಲ್ಲಿ ನಿಲ್ಲುತ್ತದೆ ಎಂದು ಪರಿಶೀಲಿಸುವುದು. ಮೂರನೇ ವಿಧಾನ – ಈವರೆಗಿನ ನಮ್ಮ (ಕನ್ನಡದ) ಸಿನಿಮಾ ಪರಂಪರೆಯಲ್ಲಿ ಇಂದಿನ ಸಿನಿಮಾ ಎಲ್ಲಿ ನಿಲ್ಲುತ್ತದೆ ಎಂದು ಪರಿಶೀಲಿಸುವುದು.

ಮೊದಲಿಗೆ ಕನ್ನಡ ಸಿನಿಮಾದ ಪರಂಪರೆಯನ್ನು ನೆನಪಿಸಿಕೊಳ್ಳೋಣ. ಪ್ರಸ್ತುತ ಪ್ರಶಸ್ತಿಯ ಹೊಳಪಿನಲ್ಲಿ ಬೀಗುತ್ತಿರುವ ಚಿತ್ರಗಳು ಅಥವಾ ಕಳೆದ ಐದಾರು ವರ್ಷಗಳಲ್ಲಿ ಪ್ರಶಸ್ತಿ ಪಡೆದ ಚಿತ್ರಗಳು ಕನ್ನಡ ಸಿನಿಮಾ ಪರಂಪರೆಯಲ್ಲಿ ಎಲ್ಲಿ ನಿಲ್ಲುತ್ತವೆ ಎಂದು ಅವಲೋಕಿಸಿದರೆ ಇವತ್ತಿನ ಚಿತ್ರಗಳ ಸ್ಥಿತಿಗತಿ ಸ್ಪಷ್ಟವಾಗಿಹೋಗುತ್ತದೆ. ಅಂತರರಾಷ್ಟ್ರೀಯ ಮನ್ನಣೆ ಪಡೆದ, ರಾಮ್ ರೆಡ್ಡಿ ನಿರ್ದೇಶನದ 'ತಿಥಿ' ಚಿತ್ರ ಹೊರತುಪಡಿಸಿದರೆ ಇತ್ತೀಚಿನ ವರ್ಷಗಳ ಯಾವುದೇ ಸಿನಿಮಾವನ್ನು ಕನ್ನಡದ ಅತ್ಯುತ್ತಮ ಚಿತ್ರಗಳ ಪಟ್ಟಿಯಲ್ಲಿ ಕಲ್ಪಿಸಿಕೊಳ್ಳುವುದು ಕಷ್ಟ. ನಿಜ, ಹೊಸ ಪ್ರತಿಭೆಗಳು ಹೊಸ ಕಾಲದ ಸಂವೇದನೆಗಳನ್ನು ಕನ್ನಡ ಸಿನಿಮಾಗಳಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಆ ಪ್ರತಿಭೆಗಳ ಮೂಲಕ ಒಂದಷ್ಟು ಒಳ್ಳೆಯ ಸಿನಿಮಾಗಳು ರೂಪುಗೊಂಡಿವೆಯೇ ಹೊರತು, ಅವುಗಳನ್ನು ಅತ್ಯುತ್ತಮ ಚಿತ್ರಗಳ ಸಾಲಿನಲ್ಲಿ ಕಲ್ಪಿಸಿಕೊಳ್ಳುವುದು ಕಷ್ಟ. ಪ್ರಯೋಗಶೀಲ

## ಮಹತ್ವಾಕಾಂಕ್ಷೆ ಇಲ್ಲ

**-ಎಂ.ಕೆ. ರಾಘವೇಂದ್ರ,** ಪ್ರಸಿದ್ಧ ಸಿನಿಮಾ ವಿಮರ್ಶಕ

'ಕನ್ನಡ ಸಿನಿಮಾ' ಹೆಸರಿನಲ್ಲಿ ಈವರೆಗೆ ಇದ್ದುದು ಮೈಸೂರು ಸಿನಿಮಾ. ಆ ಜಾಗದಲ್ಲೀಗ ಮಂಗಳೂರಿನ (ಕರಾವಳಿಯ) ಪ್ರತಿಭೆಗಳು ಕಾಣಿಸಿಕೊಳ್ಳುತ್ತಿರುವುದು, ಅಲ್ಲಿನ ಫ್ಲೇವರ್ ಕಾಣಿಸುತ್ತಿರುವುದು ಒಂದು ಪ್ರಮುಖ ಬೆಳವಣಿಗೆ. ಮೈಸೂರು ಸಿನಿಮಾನೇ ಕರ್ನಾಟಕದ ಸಿನಿಮಾ ಅಲ್ಲ ಎನ್ನುವ ಹಿನ್ನೆಲೆಯಲ್ಲಿ ಈ ಬದಲಾವಣೆ ಮುಖ್ಯವಾದುದು. (ಮಂಗಳೂರಿನಿಂದ ಬಂದವರು ಸಿನಿಮಾದಲ್ಲಿ ಬೆಂಗಳೂರನ್ನು ಕೇರ್ ಮಾಡಲ್ಲ.) ಆದರೆ, ಗುಣಾತ್ಮಕ ದೃಷ್ಟಿಯಿಂದ ಕನ್ನಡ ಸಿನಿಮಾಗಳಲ್ಲಿ ಮಹತ್ವದ ಬದಲಾವಣೆಯೇನೂ ಕಾಣಿಸುತ್ತಿಲ್ಲ.



ಪವನ್‌ಕುಮಾರ್ ರೀತಿಯ ನಿರ್ದೇಶಕರು ಸ್ವಲ್ಪ ಭಿನ್ನವಾಗಿ ಕಾಣಿಸುತ್ತಾರೆ. ಅವರ ಮೂಲಕ ಅರ್ಬನ್ ಸಿನಿಮಾ ಕೂಡ ಕನ್ನಡದಲ್ಲಿ ಕಾಣಿಸ್ತಿದೆ. ಆದರೆ, ಇಂಥವರಿಗೆ ಸ್ಥಳೀಯ ಸೊಗಡು ಮುಖ್ಯವಾಗೊಲ್ಲ. 'ಯು ಟರ್ನ್', 'ಲೂಸಿಯಾ' ಸಿನಿಮಾಗಳನ್ನು ಬೇರೆ ಯಾವ ಭಾಷೆಯಲ್ಲಿ ಮಾಡಿದರೂ ಏನೂ ವ್ಯತ್ಯಾಸವಾಗೊಲ್ಲ.

ಕಲಾತ್ಮಕ ಸಿನಿಮಾದ ವಿಷಯಕ್ಕೆ ಬಂದರೂ ರಾಷ್ಟ್ರೀಯ ಮಟ್ಟದಲ್ಲಿ ಗಮನಿಸಬಹುದಾದ ಪ್ರಯೋಗಗಳು ನಮ್ಮಲ್ಲಿ ನಡೆಯುತ್ತಿಲ್ಲ. ನಮ್ಮ ಆರ್ಟ್ ಫಿಲ್ಮ್ ಡೈರೆಕ್ಟರ್‌ಗಳಿಗೆ ಮಹತ್ವಾಕಾಂಕ್ಷೆ ಇಲ್ಲ, ಅವರುಗಳು ಸವಾಲುಗಳಿಗೆ ಮುಖಾಮುಖಿ ಆಗೊಲ್ಲ. ಈ ಮಿತಿಗಳ ನಡುವೆಯೂ 'ತಿಥಿ'ಯಂಥ ಸಾರ್ವಕಾಲಿಕ ಅತ್ಯುತ್ತಮ ಚಿತ್ರ ರೂಪುಗೊಂಡಿದ್ದನ್ನು ಗಮನಿಸಬೇಕು. 'ತಿಥಿ'ಯಂಥ ಸಿನಿಮಾ ಭಾರತದ ಯಾವ ಭಾಷೆಯಲ್ಲೂ ಬಂದಿಲ್ಲ. 'ತಿಥಿ' ಹಾಗೂ 'ಕೋರ್ಟ್' ಕಳೆದೊಂದು ದಶಕದಲ್ಲಿ ರೂಪುಗೊಂಡಿರುವ ಭಾರತದ ಅತ್ಯುತ್ತಮ ಸಿನಿಮಾಗಳು.

ಮರಾಠಿ, ಬೆಂಗಾಲಿ ಭಾಷೆಗಳಲ್ಲೂ ಗಮನಾರ್ಹ ಪ್ರಯೋಗಗಳೇನೂ ನಡೆದಂತಿಲ್ಲ. ಮರಾಠಿಯಲ್ಲಿ ಬ್ರಾಹ್ಮಿನ್ಸ್ ಫಿಲ್ಮ್‌ಗಳೇ ಹೆಚ್ಚು. ಇನ್ನು ಬೆಂಗಾಲಿಯಲ್ಲಿ ಪ್ರಿಟೆನ್ಷಿಯಸ್ ಸಿನಿಮಾಗಳೇ ಹೆಚ್ಚು. ಇದ್ದುದರಲ್ಲಿ ತಮಿಳು, ಮಲಯಾಳಂ ಸಿನಿಮಾಗಳೇ ಪರವಾಗಿಲ್ಲ. ಅದರಲ್ಲೂ ತಮಿಳಿನ ಜನಪ್ರಿಯ ಸಿನಿಮಾಗಳ ವ್ಯಾಕರಣ ಗಮನಸೆಳೆಯುವಂತಿದೆ.